ಅದೇ ರಸ್ತೆಯಲ್ಲೇ ಜಾಗರೂಕತೆಯಿಂದ ಜೀಪು ಚಲಾಯಿಸುತ್ತ ಎಡಕ್ಕೆ ತಿರುಗಿ ಅಡ್ಡರಸ್ತೆ ಹಿಡಿದು ಮೈದಾನ ತಲುಪಿದರು. ರಂಗಮಂದಿರ ತುಸು ಎತ್ತರದ ಪ್ರದೇಶದಲ್ಲಿದ್ದ ಕಾರಣ ಅಲ್ಲಿ ನೀರು ನುಗ್ಗಿರಲಿಲ್ಲ. ಹಾಗಾಗಿ ಅದನ್ನೇ ನಿರ್ವಸತಿಗರಿಗೆ ತೆರವು ಮಾಡಿ ಕೊಡಲಾಗಿತ್ತು. ಅಲ್ಲಿ ಹೋಗಿ ನೋಡಿದಾಗ ಬಹಳಷ್ಟು ಜನ ಜಮಾಯಿಸಿದ್ದರು. ಎಲ್ಲರೂ ತಮ್ಮವರನ್ನು, ಮನೆಯನ್ನು ಕಳೆದುಕೊಂಡ ದುಗುಡದಲ್ಲೇ ಇದ್ದರು. ಅಲ್ಲಿ ಜಾತ್ರೆಯಂತೆ ಸೇರಿದ್ದ ಜನರ ನಡುವೆ ಕಾಯ ತಮ್ಮವರಿಗಾಗಿ ಆಸೆಯಿಂದ ಹುಡುಕಾಡಿದ. ಅಜ್ಜರಕಾಡಿನ ಯಾವ ನಿವಾಸಿಯ ಕಾಣದಾಗ ಅವನ ಚಿಂತೆ ಇನ್ನಷ್ಟು ಹೆಚ್ಚಾಯಿತು. ಯೋಗೀಶರೂ ಅದನ್ನು ಅರ್ಥ ಮಾಡಿಕೊಂಡರು. ಪುನರ್ವಸತಿ ಕೇಂದ್ರದ ಮೇಲ್ವಿಚಾರಕರ ಬಳಿ ಹೋಗಿ ವಿಚಾರಿಸಿ ಬಂದರು.

'ಜನ ಬರ್ತಾನೆ ಇದ್ದಾರೆ ಸರ್.. ಅಂಥ ಜನರಿಗೆ ಇಲ್ಲಿ ಇದು ಬಿಟ್ಟರೆ ಬೇರೆ ವ್ಯವಸ್ಥೆ ಇಲ್ಲ.. ಇಡೀ ರಸ್ತೇಲಿ ನೀರು ತುಂಬಿದೆ.. ಬೇರೆ ಕಡೆ ಹೋಗಲು ಸಾಧ್ಯವಿಲ್ಲ.. ಸ್ವಲ್ಪ ಕಾದು ನೋಡಿದರೆ ಇಲ್ಲಿಗೆ ಬರಬಹುದೇನೋ..ಅಷ್ಟರ ತನಕ ಹೊಟ್ಟೆಗೆ ಏನಾದರೂ ಹಾಕಿಕೊಳ್ಳಲಿ' ಎಂದರು. ಅವರಿದ್ದ ಮನಸ್ಥಿತಿಯಲ್ಲಿ ಯಾವುದೂ ಬೇಕೆನಿಸಲಿಲ್ಲ. ಮನೆಯವರ ಮುಖ ಕಂಡರೆ ಸಾಕೆನ್ನುವಂತಾಗಿತ್ತು. ಕಾಯ ಮೂಲೆಯಲ್ಲಿ ಹೋಗಿ ಗೋಡೆಗೊರಗಿ ಬಿಕ್ಕಳಿಸುತ್ತ ಕುಳಿತ.

ಯಾವ ಸಂಸಾರದ ಬಂಧನ ಬೇಡವೆಂದು ವೈರಾಗ್ಯ ಭಾವದಿಂದ ಅಲೆದಾಡುತ್ತಿದ್ದನೋ, ಯಾವ ಮೋಹದಿಂದ ಕಳಚಿಕೊಂಡು ನಿರ್ಲಿಪ್ತತೆಯ ಕೋಶದೊಳಗೆ ಹುದುಗಿ ಹೋಗಿದ್ದನೋ, ಬದುಕಿನ ಮೇಲೆ ಆಸೆಯೇ ಇಲ್ಲದೇ ಸಮಾಧಿಯ ಕಡೆಗೆ ಚಲಿಸುತ್ತಿದ್ದನೋ, ಅಲ್ಲಿಂದ ಕಮಲಿ ಮತ್ತು ಪಾಂಡು ಅವನನ್ನು ವಿಮುಖನಾಗಿ ನಿಲ್ಲುವಂತೆ ಮಾಡಿದ್ದರು. ಆ ಸಮಾಧಿ ಸ್ಥಿತಿಯಿಂದ ಕಾಯ ಪೂರ್ತಿಯಾಗಿ ಕಳಚಿಕೊಂಡು ಕಮಲಿಯ ಪ್ರೇಮದಲ್ಲೂ ಪಾಂಡುವಿನ ಅನುಬಂಧದಲ್ಲೂ ಬೆರೆತು ಹೋಗಿದ್ದ. ಕಮಲಿಯ ಜೊತೆ ದಾಂಪತ್ಯದ ಸಂಬಂಧ ಏರ್ಪಡದಿದ್ದರೂ ಅವಳ ಜೊತೆ ಅದಕ್ಕೂ ಮಿಗಿಲಾಗಿ ಪ್ರೀತಿಯ ಬಂಧನದಲ್ಲಿ ಬೆಸೆದು ಹೋಗಿದ್ದ. ಹಾಲಿನಲ್ಲಿ ಬೆರೆತ ಸಕ್ಕರೆಯಂತೆ, ಹೂವಿನಲ್ಲಿ ಬೆರೆತ ಸುಗಂಧದಂತೆ ಅವರಿಬ್ಬರ ನಡುವೆ ಒಂದು ಸುಮಧುರ ಬಂಧ ಬೆಸೆದಿತ್ತು. ಎಲ್ಲಾ ನೆನಪುಗಳನ್ನು ರಾಶಿ ಹಾಕಿದ ಮನಸ್ಸು ಅವನನ್ನು ಮತ್ತಷ್ಟು ಸಂಕಟಕ್ಕೆ ಈಡು ಮಾಡಿತು. ಸಂತಾಪ, ಸಂಕಟ, ಅಸಹಾಯಕತೆಯಲ್ಲಿ ಪರಿತಪಿಸುತ್ತ ಕುಳಿತ ಕಾಯನಿಗೆ ಒಂದು ಸಮಾಧಾನದ ಮಾತು ಹೇಳಲೂ ಅಶಕ್ತನಂತೆ ಕುಳಿತ ಜಂಪಣ್ಣನೂ ಒಳಗೇ ಸೋತು ಹೋಗಿದ್ದ.

ಹೊತ್ತು ಹೋಗುತ್ತಿತ್ತು. ದಿಕ್ಕು ತೋಚದಂತಾಗಿತ್ತು. ಅವನು ಬಯಸಿದ ಮನುಷ್ಯ ರಾರೂ ಕಾಣದೇ ಹೋದಾಗ ಅವನ ಧೈರ್ಯ ಉಡುಗುತ್ತಿತ್ತು. ಸ್ವಲ್ಪ ಹೊತ್ತು ಕಳೆದ ಬಳಿಕ ಬಂದ ತಂಡದಲ್ಲಿ ಮಂಜಣ್ಣನ ಮುಖ ಕಾಣುತ್ತಲೇ ಕಾಯನಲ್ಲಿ ಹೊಸ ಚೈತನ್ಯ ಬಂದಂತಾಗಿ ಧಡಕ್ಕನೆ ಎದ್ದು ಬಾಗಿಲಿನತ್ತ ದೌಡಾಯಿಸಿದ.

'ಮಂಜಣ್ಣ.. ಕಡೆಗೂ ಇಲ್ಲಿ ಬಂದ್ರಲ್ವಾ.. ಕಮಲಿ, ಪಾಂಡು ಎಲ್ಲಿ..?' ಒಂದೇ ಸಮನೆ ಬಡಬಡಿಸಿದವನು ಅವನ ಹಿಂದೆ ನಿಂತಿದ್ದ ಜನರ ನಡುವೆ ತನ್ನವರಿಗಾಗಿ ಅರಸಿದವನಿಗೆ ನಿರಾಶೆ ಕಾದಿತ್ತು.

'ಮಂಜಣ್ಣ, ಅವರಿಬ್ಬರೂ ಎಲ್ಲಿ..?'

'ಗೊತ್ತಿಲ್ಲ..ಕಾಯ.. ನಾವೂ ನಿನ್ನ ಜೊತೆ ಬೆಳಿಗ್ಗೆ ಕಾರಗದ್ದೆಗೆ ಹೊರಟೆವಾ.. ನಿಮಗೆ ಪೇಪರ್ ಗಾಡಿ ಸಿಕ್ತಾ.. ನಾವು ಕಾದು ಕಾದು ಸಾಕಾಯಿತು.. ಮಳೆ ಜೋರು ಬರಲು ಶುರುವಾಯಿತು.. ಹೋಗೋದು ಬೇಡವೆನಿಸಿ ನಾವೂ ಗೋಪಾಲಣ್ಣ ವಾಪಸ್ಸು ಕೆಳಗೆ ಇಳಿಯುತ್ತಲೂ ಜೋರು ಶಬ್ದವಾಯಿತು.. ನೋಡಿದರೆ ಸೇತುವೇನೇ ಮುರಿದು ಬಿದ್ದಿತ್ತು.. ನೀರಿನ ಮಟ್ಟ ಏರಲು ಶುರುವಾಗಿತ್ತು.. ಅಲ್ಲಿದ್ದರೆ ಕಷ್ಟ ಅಂತ ಬೇಗ ಬೇಗ ಮನೆ ಕಡೆ ಧಾವಿಸಿ ದುಡ್ಡು, ಕೆಲವು ಬಟ್ಟೆ ಹಿಡಿದು ಹೊರಟಾಗ ಕಮಲಿ ಅಲ್ಲಿ ಎಲ್ಲೂ ಕಾಣಲಿಲ್ಲ.. ಸುತ್ತಮುತ್ತ ಹುಡುಕಾಡಿ ಕರೆದರೂ ಅವಳೆಲ್ಲೂ ಕಾಣಲಿಲ್ಲ.. ಆಕೆ ಹೊರಟು ಬಂದಿರಬೇಕು ಅಂತ ಭಾವಿಸಿ ನಾವು ಬಂದು ಬಿಟ್ಟೆವು' ಎಂದು ಬೆಳಗ್ಗಿನ ಘಟನೆಯನ್ನು ವಿವರಿಸಿದ ಮಂಜಣ್ಣ.

'ಅಲ್ಲಿಂದ ಎಲ್ಲಿಗೆ ಹೋಗ್ತಾಳೆ ಮಂಜಣ್ಣ.. ನೀವು ಸರಿಯಾಗಿ ನೋಡಬೇಕಿತ್ತು ತಾನೇ..? ನಿಮ್ಜೊತ್ಟೆಗೆ ಕರೆ ತರಬೇಕಿತ್ತು ತಾನೆ.. ಒಂಟಿ ಹೆಣ್ಣುಮಗಳು ಮತ್ತು ಕಂದನನ್ನು ಬಿಟ್ಟು ಬರಲು ಮನಸ್ಸಾದರೂ ಹೇಗೆ ಬಂತು ನಿಮಗೆ..?' ಕಾಯ ದ್ರವಿಸಿ ಹೋದ.

'ಇಲ್ಲಾ ಕಾಯ.. ನಿಜವಾಗಲೂ ಎಲ್ಲರೂ ಸೇರಿ ಹುಡುಕಿದೆವು.. ಮನೆ ಒಳಗೆ ಹೊರಗೆ, ಸುತ್ತ ಮುತ್ತ, ನದಿ ಹತ್ರ ಎಲ್ಲ ನೋಡಿದೆವು. ಕೂಗಿ ಕರೆದರೂ ಕೇಳಲಿಲ್ಲ.. ಕಮಲವ್ವ ಎಲ್ಲೂ ಕಾಣಲಿಲ್ಲ.. ಆಕೀನ್ನ ಬಿಟ್ಟು ಬರುತ್ತೇವಾ ನಾವು ಹೇಳು..' ಮಂಜಣ್ಣ ನುಡಿದ.

'ಇಡೀ ಹುಡುಕಾಡಿದರೂ ಕಮಲಿ ಕಾಣಲಿಲ್ಲವೆಂದರೆ ಅವಳೆಲ್ಲಿಗೆ ಹೋದಳು..? ಅಲ್ಲಿಂದ ಮುಂಚೆಯೇ ಹೊರಟು ಬಿಟ್ಟಳೇ..? ಅಥವಾ ಅಲ್ಲೇ ಪ್ರಾಣಭಯದಿಂದ ಉಳಿದುಕೊಂಡಳೇ..? ಅಲ್ಲೇ ನಿಂತು ಇದೆಲ್ಲವನ್ನೂ ಆಲಿಸುತ್ತಿದ್ದ ಯೋಗೀಶರಿಗೆ ಪೂರ್ತಿ ಚಿತ್ರಣದ ಅರಿವಾಗಿತ್ತು.

'ಕಾಯ ಗಾಬರಿ ಆಗಬೇಡ.. ನೋಡೋಣ.. ಆಕೆನೂ ಇಲ್ಲೇ ಬರಬಹುದು.. ಕಾಯೋಣ..' ಎಂದವರು, 'ಬೇರೆ ದಾರಿಯಿಲ್ಲ..' ಎಂದೂ ಸೇರಿಸಿ ಪರಿಸ್ಥಿತಿ ಅವನಿಗೆ ಮನದಟ್ಟು ಮಾಡಲೆತ್ನಿಸಿದರು. ಕಾಯನಿಗೆ ಚಡಪಡಿಸುತ್ತ ನಿಲ್ಲುವ ಹೊರತಾಗಿ ಬೇರೆ ದಾರಿ ಕಾಣಲಿಲ್ಲ. ಅಲ್ಲಿನ ಕೇಂದ್ರದಲ್ಲಿ ಜನಜಾತ್ರೆ ನಡೆದೇ ಇತ್ತು. ಕತ್ತಲು ಕವಿಯ ತೊಡಗಿತ್ತು. ಅಲ್ಲಿದ್ದವರಿಗೆ ರಾತ್ರಿ ಊಟಕ್ಕೆ ಗಂಜಿ ಹಂಚಲಾಯಿತು. ಎಲ್ಲರೂ ಸರದಿ ಸಾಲಿನಲ್ಲಿ ನಿಂತು ಗಂಜಿ ಸ್ವೀಕರಿಸುವಾಗ ಜಂಪಣ್ಣ ಕಾಯನ ಮುಂದೆ ಅಜ್ಜರಕಾಡಿನ ಮಾಲೀಕನೆಂದು ಬೀಗಿದ ಅರವಿಂದ ಕೂಡಾ ಇವರೊಂದಿಗೇ ನಿಂತು ತಟ್ಟೆ ಹಿಡಿದು ಗಂಜಿ ಸ್ವೀಕರಿಸುವುದನ್ನು ಕಂಡು ಕೆಡುಕೆನಿಸಿತು. ಎಷ್ಟೇ ಹಣ, ಅಹಂಕಾರ ಇದ್ದರೂ ಪ್ರಕೃತಿ ಮುಂದೆ ಎಲ್ಲರೂ ಒಂದೇ.. ಎಲ್ಲರಿಗೂ ಹಸಿವು ಒಂದೇ..!

ಅರವಿಂದ ಇವರನ್ನು ಕಂಡು ಕಣ್ತಪ್ಪಿಸಲು ಯತ್ನಿಸಿದ. ಅವನಿಗೆ ನಾಚಿಕೆಯಿಂದ ಇವರೊಡನೆ ದೃಷ್ಟಿ ಸೇರಿಸಲೇ ಆಗಲಿಲ್ಲ.

'ಇಡೀ ದಕ್ಷಿಣ ಭಾರತದಲ್ಲಿ ಈ ರೀತಿ ಅತಿವೃಷ್ಟಿ ಆಗಿದೆ..ಕಾಯ.. ಇಲ್ಲಿ ಮಾತ್ರ ಅಲ್ಲ.. ನಮ್ಮ ರಾಜ್ಯದ ಬಹಳಷ್ಟು ಭಾಗ ನೆರೆ ಪ್ರದೇಶವಾಗಿದೆ..' ಯೋಗೀಶರು ಕಾಯನ ಬಳಿ ನುಡಿದರು. ಅವನು ಉಂಡ ಶಾಸ್ತ್ರ ಮಾತ್ರ ಮಾಡಿದ. ರಾತ್ರಿ ಅಲ್ಲಿನ ಗೌಜಿಗಿಂತಲೂ ಮನಸ್ಸಲ್ಲಿ ಚಿಂತೆಯ ಗೌಜಿಯೇ ಹೆಚ್ಚಿತ್ತು. ಕಮಲಿ ಮತ್ತು ಪಾಂಡು ಬಂದು ಸೇರಿಕೊಂಡರೆ ಸಾಕೆನಿಸಿತ್ತು. ಹೇಗೋ ಬೆಳಗು ಮಾಡಿದವನಿಗೆ ಮತ್ತೆ ನಿರೀಕ್ಷೆಯೇ ಕಾಯಕವಾಯಿತು.

ಮತ್ತೊಂದು ದಿನ ಸರಿದು ಹೋಯಿತೇ ವಿನಹ ಮಳೆಯ ತೀವ್ರತೆ ಕಡಿಮೆಯಾಗಲಿಲ್ಲ. ಕಾಯನ ನಿರೀಕ್ಷೆಯ ದೀಪ ಮಾತ್ರ ಕ್ಷೀಣವಾಗಿ ಉರಿಯತೊಡಗಿತ್ತು.

'ಇಷ್ಟು ಹೊತ್ತಿಗಾಗಲೇ ಕಮಲಿ ಬರಬೇಕಿತ್ತಲ್ಲವೇ..? ಮಗು ಬೇರೆ ಚಿಕ್ಕದು.. ಎಲ್ಲಿಗೆ ಹೋಗಿರಬಹುದು..? ಶಿವಣ್ಣನ ಹತ್ರ ಹೋದಳಾ..? ಅವಳ ಅಕ್ಕ ಇದ್ದಾಳೆನ್ನುವ ಕಾರಣಕ್ಕೆ' ಕಾಯನಿಗೂ ಮುಖದಲ್ಲಿ ಸಣ್ಣ ಭರವಸೆ ಮೂಡಿತು. ಯೋಗೀಶರತ್ತ ಧಾವಿಸಿ ವಿಷಯ ತಿಳಿಸಿದ.

'ಅನಂತಯ್ಯನ ತೋಟದಲ್ಲೂ ನೀರು ನುಗ್ಗಿ ಎಲ್ಲಾ ಹಾಳಾಗಿದೆ ಕಾಯ.. ಆತ ನನಗೆ ಪರಿಚಿತನೇ.. ಆದ್ರೂ ನಿನಗಾಗಿ ವಿಚಾರಿಸುವೆ' ಎಂದವರು ಅಲ್ಲಿಂದ ನಿರ್ಗಮಿಸಿದರು. ಯೋಗೀಶರು ಹಿಂತಿರುಗುವಾಗ ಕಮಲಿ ಮತ್ತು ಪಾಂಡುವನ್ನು ಕರೆ ತರುವರೆನ್ನುವ ಆಸೆ, ಅವರೊಬ್ಬರೇ ಬಂದಾಗ ಹುಸಿಯಾಯಿತು.

'ಅಲ್ಲಿ ಕಮಲಿ ಅಕ್ಕ ಭಾವ ಮಾತ್ರ ಇದಾರೆ.. ಅವರನ್ನು ತನ್ನ ಮನೇಲಿ ತಂದು ಇಟ್ಕೊಂಡಿದ್ದಾರೆ ಅನಂತಯ್ಯ' ಎಂದು ಹೋದ ಕೆಲಸ ಸಫಲವಾಗದೇ ನಿರಾಸೆಯಿಂದ ವಿವರಿಸಿದರು ಯೋಗೀಶರು.

'ಹಾಗಾದರೆ ಕಮಲಿ ಇನ್ನೂ ಅಜ್ಜರಕಾಡಿನಲ್ಲೇ ಇರಬಹುದು.. ನಾನು ಅಲ್ಲಿಗೆ ಹೋಗ್ತೀನಿ..' ಎಂದು ಹಠ ಹಿಡಿದು ಕುಳಿತ. ಅವನನ್ನು ನಿಯಂತ್ರಿಸಲು ಯೋಗೀಶರಿಗೆ ಮತ್ತು ಇತರೆ ಪೇದೆಯವರಿಗೆ ಸಾಕುಸಾಕಾಯಿತು.

'ಮಳೆ ಒಂದು ಕಮ್ಮಿಯಾಗಲೀ.. ನಿನ್ನ ಹೆಂಡ್ತಿ ಮತ್ತು ಮಗುವನ್ನು ಹುಡುಕಿ ಕೊಡುವ ಜವಾಬ್ದಾರಿ ನಮ್ಮದು.. ಸರೀನಾ..?' ಅಲ್ಲಿನ ಸ್ವಯಂಸೇವಕರು ಕಾಯನ ಸಂಕಟ ನೋಡಲಾಗದೇ ಆಶ್ವಾಸನೆ ನೀಡಿದರು. ಇದೇಕೋ ಮಳೆ ತಮ್ಮೆಲ್ಲರ ಸುಖ, ಸಂತೋಷವನ್ನು ಹೊತ್ತು ಒಯ್ಯಲೇ ಈ ರೀತಿಯಾಗಿ ಒಂದೇ ಸಮನೆ ಸುರಿಯುತ್ತಿರುವಂತೆ ಭಾಸವಾಗಿತ್ತು ಕಾಯನಿಗೆ. ಕಮಲಿ ಮಗುವನ್ನು ಹೊತ್ತುಕೊಂಡು ಒಂಟಿಯಾಗಿ ಕಾರಗದ್ದೆಗೆ ಬರಲಾರಳು, ಏಕೆಂದರೆ ಈ ಊರು ತಿರುಗಾಡಿ ಆಕೆಗೆ ಅಭ್ಯಾಸವೇ ಇಲ್ಲ.. ಕಾರಗದ್ದೆಯಿಂದ ಅಜ್ಜರಕಾಡಿಗೆ ಆಕೆ ವೀರಭದ್ರನ ಸಂಗಡ ಬಂದಿದ್ದಳು. ಮದುವೆಯಾದ ಬಳಿಕವೂ ತಾವಿಬ್ಬರೂ ಜೊತೆಯಾಗಿ ಎಲ್ಲೂ ಅಡ್ಡಾಡಿದ್ದಿಲ್ಲ..